

## ಮುಂಜಾನೆ ಕನಸು



ಹೆಂಡತಿ: ರ‍್ರೀ... ನೀವು ನಂಗೆ ಡೈಮಂಡ್ ನೆಕ್ಲೆಸ್ ಕೊಡಿಸಿದಂತೆ ಮುಂಜಾನೆ ಕನಸು ಬಿತ್ತು. ನಿಮಗೆ ಅದರ ಅರ್ಥ ಗೊತ್ತಾ?

ಗಂಡ: ಇಲ್ಲ, ಬಹುಶಃ ಇವತ್ತು ರಾತ್ರಿ ತಿಳಿಯುತ್ತೆ.

ಸಂಜೆ ಮನೆಗೆ ಬಂದ ಗಂಡನ ಕೈಯಲ್ಲಿ ಒಂದು ಗಿಫ್ಟ್ ಪ್ಯಾಕೆಟ್. ಹೆಂಡತಿ ಆತುರಾತುರವಾಗಿ ಬಿಚ್ಚಿ ನೋಡಿದಾಗ ಒಳಗಿದ್ದ ಪುಸ್ತಕ 'ಕನಸಿನ ಅರ್ಥಗಳು.'

★★★

## ಇವರ‍್ಯಾರು?

ಫ್ಯಾಮಿಲಿ ಆಲ್ಬಂ ನೋಡುತ್ತಾ.

ಗುಂಡ: ಇವರ‍್ಯಾರಮ್ಮ ನಿಂಜೊತೆ ಇರೋರು? ಕರ್ಲಿ ಹೇರ್ ಹ್ಯಾಂಡ್‌ಸಂ ಪರ್ಸನಾಲಿಟಿ...

ಅಮ್ಮ: ಅವು ನಿಮ್ಮಪ್ಪ ಕಣೋ.

ಗುಂಡ: ಹಾಗಾದ್ರೆ ಈಗ ನಂ ಜೊತೆ ಇದ್ದಾರಲ್ಲ ದಪ್ಪಗೆ... ಬಾಲ್ಡ್ ಹೆಡ್... ಅವ್ರ್ಯಾರು?

★★★

## ಮೆಡಿಸಿನ್

ಪೇಶಂಟ್: ಡಾಕ್ಟರ್, ನೀವು ಈಗ ಬರೆದುಕೊಟ್ಟ ಮೆಡಿಸಿನ್ ಅನ್ನು ಜೀವಮಾನ ಪೂರ್ತಿ ತಗೋಬೇಕಾ?

ಡಾಕ್ಟರ್: ಹ್ಞಾಂ! ಹೌದು ಬೇರೆ ದಾರೀನೇ ಇಲ್ಲ.

ಪೇಶಂಟ್: ಹಾಗಾದ್ರೆ.. ನಾನು ಕೇವಲ ಏಳು ದಿನ ಮಾತ್ರ ಬದುಕಿರ್ತೀನಾ?

★★★

ಹೆಂಡತಿ ತುಂಬಾ ರೊಮ್ಯಾಂಟಿಕ್ ಮೂಡ್‌ನಲ್ಲಿ ಗಂಡನಿಗೆ ಎಸ್‌ಎಂಎಸ್ ಕಳಿಸಿದ್ಲು. 'ನೀವು ನಗ್ತಿದ್ರೆ ನಿಮ್ಮ ಮುಗುಳ್ನಗೆ ನನಗೆ ಕೊಡಿ, ನೀವು ಕಾಫಿ ಕುಡಿತಿದ್ರೆ ನನಗೊಂದು ಗುಟುಕು ಕೊಡಿ, ನೀವು ನಿದ್ರೆಯಲ್ಲಿದ್ರೆ ನಿಮ್ಮ ಕನಸನ್ನು ನನಗೆ ಕೊಡಿ, ನಿಮಗೆ ಅಳು ಬಂದ್ರೆ, ನಿಮ್ಮ ಕಣ್ಣೀರು ನನಗೆ ಕೊಡಿ, ಐ ಲವ್ ಯೂ...'

ಆಫೀಸ್‌ನಲ್ಲಿ ಫೈಲ್ಸ್ ನಡುವೆ ಸಿಕ್ಕಿಕೊಂಡ ಗಂಡ ಗರಂ ಆಗಿ ರಿಪ್ಲೈ ಮಾಡ್ದ; 'ನಾನೀಗ ಟಾಯ್ಲೆಟ್‌ನಲ್ಲಿದ್ದೀನಿ, ಹೇಳು ಏನ್ಮಾಡ್ಬೇಕು?'

(ಸಂ) ಸುಮಾ ಕಳಸಾಪುರ

---



ಮಂತ್ರಿ: 'ಮಗನೇ ರಾಜಕೀಯದಲ್ಲಿ ಪ್ರಾಮಾಣಿಕತೆ ಜತೆ ವಿವೇಚನೆಯೂ ಮುಖ್ಯ'

ಮಗ: 'ಪ್ರಾಮಾಣಿಕತೆ ಅಂದರೆ?'

ಮಂತ್ರಿ: 'ಅಂದರೆ ನೀನು ಮಾತು ಕೊಟ್ಟರೆ ಅದನ್ನು ಪಾಲಿಸಬೇಕು'

ಮಗ: 'ಹಾಗಾದರೆ ವಿವೇಚನೆ ಎಂದರೇನು?'

ಮಂತ್ರಿ: 'ಮಾತು ಕೊಡದೇ ಇರುವುದು'

★★★

ಗುಂಡ: 'ಲೇ ನಾವು ಹೋದಸಲ ಊಟಿಗೆ ಹೋದಾಗ ಯಾವ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದು ಎಂಬುದು ನೆನಪಿದೆಯಾ?'

ಹೆಂಡತಿ: 'ಒಂದು ನಿಮಿಷ ಇರಿ! ನಾವು ಕದ್ದುಕೊಂಡು ಬಂದ ಚಮಚದ ಸೆಟ್ ಮೇಲೆ ಅದರ ಹೆಸರು ಇದೆ'.

★★★

ಗ್ರಹಾಂಬೆಲ್ ಫೋನು ಕಂಡುಹಿಡಿದಾಗ ಮಹಿಳೆಯೊಬ್ಬಳು– 'ಮೊದಲ ಬಾರಿಗೆ ಮಾತನಾಡುವ ಯಂತ್ರ ಕಂಡುಹಿಡಿದಿದ್ದೀರಿ. ಅಭಿನಂದನೆಗಳು' ಎಂದಳು.

ಗ್ರಹಾಂಬೆಲ್ ಉತ್ತರಿಸಿದ: 'ಇಲ್ಲ ಮೇಡಂ! ನನಗಿಂತ ಮೊದಲು ಆ ದೇವರು ಹೆಂಗಸರನ್ನು ಸೃಷ್ಟಿಸಿದ. ಆ ನಂತರ ನಾನು ಈ ಯಂತ್ರವನ್ನು ಕಂಡುಹಿಡಿದೆ.'

(ಸಂ) ಎಂ.ಕೆ.ಮಂಜುನಾಥ್, ಬೆಂಗಳೂರು

## ರಿಪ್ಲೈ

ತವರಲ್ಲಿದ್ದ ಹೆಂಡತಿಗೆ ಡೈವೋರ್ಸ್ ನೋಟಿಸ್ ಕಳುಹಿಸಿದ ಕೆಲವು ತಿಂಗಳುಗಳ ನಂತರ, ವೆಂಕಿ ಪಶ್ಚಾತ್ತಾಪ ಪಟ್ಟ; ಹೇಗಾದರೂ ಮಾಡಿ ಹೆಂಡತಿಯನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ನಿರ್ಧರಿಸಿ, ಕಾವ್ಯಮಯವಾದ ಎಸ್‌ಎಂಎಸ್ ಕಳುಹಿಸಿದ:

ಪರಿತಪಿಸುತ್ತಿದ್ದೇನೆ, ಬಾ ಗೆಳತಿ<br>
ಮತ್ತೊಮ್ಮೆ ತುಂಬು, ನನ್ನ ಹೃದಯ ಸಿಂಹಾಸನ!<br>
ಕೂಡಲೇ, ಅತ್ತಲಿಂದ ರಿಪ್ಲೈ ಬಂದಿತ್ತು:<br>
ನೆನಪಿಸುತ್ತಿದ್ದೇನೆ, ಗೆಳೆಯ,<br>
ಮತ್ತೆ ಮತ್ತೆ, ತುಂಬು ನನ್ನ ಖಾತೆಗೆ ಮಾಸಾಶನ!

★★★

## ಕಾರಣ

ಆಕೆ: ನಿಮ್ಮ ಮನೆಯವರು ಹೊತ್ತು ಹೊತ್ತಿಗೆ ಸರಿಯಾಗಿ ಊಟ ಮಾಡ್ತಾರೆ ತಾನೆ?

ಗೆಳತಿ: ಹೌದು, ಮಾಡ್ತಾರೆ.

ಆಕೆ: ಖಾರ, ಹುಳಿ, ಮಸಾಲೆ ಪದಾರ್ಥ ಹೆಚ್ಚಾಗಿ ತಿನ್ತಾರಾ?

ಗೆಳತಿ: ಇಲ್ಲ, ಹಾಗೇನಿಲ್ಲ.

ಆಕೆ: ಡ್ರಿಂಕ್ಸ್ ಏನಾದ್ರೂ ಅಭ್ಯಾಸ ಇದೆಯಾ?

ಗೆಳತಿ: ಛೇ, ಖಂಡಿತಾ ಇಲ್ಲ.

ಆಕೆ: ಹಾಗಾದ್ರೆ, ಈ ಅಲ್ಸರ್ ಬಂದಿದ್ದಾದ್ರೂ ಹ್ಯಾಗೆ?

ಗೆಳತಿ: ಬೇಡಾಂದ್ರೂ ಕೇಳಲ್ಲಾ, ಯಾವಾಗ್ಲೂ ಹೊಟ್ಟೆ ಹುಣ್ಣಾಗೋ ಹಾಗೆ ನಗ್ತಾರೆ, ಹಾಗಾಗಿ. ಅದಿರ‍್ಲಿ, ನೀನ್ಯಾಕೆ ಆಸ್ಪತ್ರೆಗೆ ಬಂದೆ?

ಆಕೆ: ನಮ್ಮನೆಯವ್ರಿಗೆ ಫ್ರಾಕ್ಚರ್ ಆಗಿ ಇಲ್ಲೇ ಅಡ್ಮಿಟ್ ಆಗಿದ್ದಾರೆ.

ಗೆಳತಿ: ಫ್ರಾಕ್ಚರ್? ಹೇಗಾಯ್ತು?

ಆಕೆ: ಯಾವಾಗ್ಲೂ ಬಿದ್ದೂ, ಬಿದ್ದೂ ನಗ್ತಿದ್ರೆ ಇನ್ನೇನಾಗುತ್ತೆ!

(ಸಂ)ಕವಿತಾ ಮೇಗೂರು, ಉಡುಪಿ

